International Journal of Kannada Research
www.kannadajournal.com

ISSN: 2454–5813
IJKR 2022; 8(1): 92-95
© 2022 IJKR
www.kannadajournal.com
Received: 13-11-2021
Accepted: 15-12-2021

**Dr. Shivappa**
Associate Professor,
Department of History,
Government Arts College
Chitradurga, Karnataka,
India

**Corresponding Author:**
**Dr. Shivappa**
Associate Professor,
Department of History,
Government Arts College
Chitradurga, Karnataka,
India

# ಮಳವಳ್ಳಿ ತಾಲೂಕಿನ ಸಾಮಾಜಿಕ ವ್ಯವಸ್ಥೆಯ ಒಂದು ತುಲಾನಾತ್ಮ ಅಧ್ಯಯನ

**Dr. Shivappa**

ಮಂಡ್ಯದಿಂದ ಸುಮಾರು 38 ಕಿಲೋಮೀಟರ್ ದೂರದಲ್ಲಿ ಮಳವಳ್ಳಿ ಇದೆ. ಬೆಂಗಳೂರಿನಿಂದ ಸುಮಾರು 100 ಕಿಲೋಮೀಟರ್ ದೂರದಲ್ಲಿದೆ. ಮಳವಳ್ಳಿಯು ಹೊಯ್ಸಳರ ಕಾಲಕ್ಕೆ ತನ್ನದೇ ಆದ ಹೆಸರು ಪಡೆದಿತ್ತು. ಕಾವೇರಿ ನದಿಯು ಹರಿಯುತ್ತಿರುವ ಸ್ವಲ್ಪ ದೂರದಲ್ಲಿಯೇ ಕಂಡುಬರುವ ಮಳವಳ್ಳಿ ಚಾರಿತ್ರಿಕ ಹಿನ್ನೆಲೆಯಿಂದ ಹೆಸರು ಗಳಿಸಿದೆ. ಈ ಪ್ರದೇಶದಲ್ಲಿ ಗಂಗರು, ನೊಳಂಬರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ಪಾಂಡ್ಯರು, ವಿಜಯನಗರದ ಅರಸರು, ಮೈಸೂರು ಒಡೆಯರು, ಉಮ್ಮತ್ತೂರು ಪಾಳೇಗಾರರು, ಹದಿನಾಡು ಪಾಳೇಗಾರರು, ನಂದ್ಯಾಲರು, ಚನ್ನಪಟ್ಟಣ ಪಾಳೇಗಾರರು, ಹರತಿ ಅರಸರು ಹೀಗೆ ವಿವಿಧ ರಾಜರು ಮತ್ತು ಪಾಳೇಗಾರರು ಈ ಭಾಗದಲ್ಲಿ ಆಡಳಿತಾತ್ಮಕವಾಗಿ ರಾಜ್ಯಭಾರ ನಡೆಸಿದ್ದಾರೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಮಳವಳ್ಳಿ ಪ್ರಮುಖ ಪಟ್ಟಣವಾಗಿತ್ತು. ಕೋಟೆ ಆಳವಾದ ಕಂದಕ, ಸುಂದರವಾದ ಕಲ್ಯಾಣಿ ಹಾಗೂ ಅಂದಿನ ಕಾಲಕ್ಕೆ ಒಳ್ಳೆಯ ಮಾವಿನ ತೋಪುಗಳನ್ನು ಕ್ರಿ.ಶ.1685 ರ ಕಾಲಕ್ಕೆ ಇತ್ತು ಎಂಬುದು ಶಾಸನಾಧಾರಗಳಿಂದ ತಿಳಿದುಬರುತ್ತದೆ.

ಮಳವಳ್ಳಿ ತಾಲ್ಲೂಕಿನ ಜನಜೀವನದ ಸ್ವರೂಪಕ್ಕೆ ಧರ್ಮವೇ ಒಂದು ನಿರ್ಣಾಯಕ ಶಕ್ತಿಯಾಗಿದೆ ಎನ್ನಬಹುದು. ಧರ್ಮವನ್ನು ತನ್ನ ಜೀವನದ ಸಾರಸ್ವತವನ್ನಾಗಿ ಇತಿಹಾಸ ಪ್ರಾರಂಭ ಕಾಲದಿಂದಲೂ ಕಾಣುತ್ತೇವೆ. ಮಾನವನ ಜೀವನದ ಎಲ್ಲಾ ರಂಗಗಳಲ್ಲಿಯೂ ಸಮಾಜದಲ್ಲಿ ಧರ್ಮವೇ ಹಾಸುಹೊಕ್ಕಾಗಿದೆ. ಕ್ರಿ.ಶ.10ನೇ ಶತಮಾನದಿಂದ ಕ್ರಿ.ಶ.16ನೇ ಶತಮಾನದವರೆಗೂ ಗಮನಿಸಿದರೆ ಸಾಮಾಜಿಕ ಜೀವನದಲ್ಲಿ ಏರುಪೇರು ಆಗಿರುವುದನ್ನು ಸಹ ಗಮನಿಸಬಹುದು, ಧರ್ಮಗಳನ್ನು ಪ್ರತಿಭಟಿಸಿ ಧರ್ಮದ ನಿಜ ಸ್ವರೂಪವನ್ನು ಸಾಮಾಜಿಕ ಜೀವನದಲ್ಲಿ ತಿಳಿಗೊಳಿಸುವಂತಹ ಪ್ರಯತ್ನಗಳು ನಡೆದಿವೆ. ಇಂತಹ ಪ್ರಯತ್ನದಲ್ಲಿ ಕರ್ನಾಟಕದ ಪಾತ್ರ ಪ್ರಮುಖವಾಗಿದೆ. ಸಾಮಾಜಿಕ ಜೀವನವನ್ನು ಸಾಮ್ಯತೆಯ ಆಧಾರದ ಮೇಲೆ ಕಟ್ಟಲು ಪ್ರಭಾವಶಾಲಿಯಾದ ಪ್ರಯತ್ನಗಳ ಕ್ರಿ.ಶ.11–12ನೇ ಶತಮಾನದಲ್ಲಿ ನಡೆದಿವೆ. ಕ್ರಿ.ಶ.10–16ನೇ ಶತಮಾನದ ಸಾಮಾಜಿಕ ಜೀವನದ ಮೊದಲಿಗೆ ತಿಳಿಯಬೇಕಾದರೆ ಆಧಾರಗಳು ಬೇಕು. ಆದರೆ ಮಳವಳ್ಳಿ ತಾಲ್ಲೂಕಿಗೆ ಪೂರಕವಾಗಿ ಆಧಾರಗಳು ಕಡಿಮೆ, ಆದರೆ ಧರ್ಮ ಶಾಸ್ತ್ರಗ್ರಂಥಗಳಿಂದ ಸ್ವಲ್ಪ ತಿಳಿಯಬಹುದಾಗಿದೆ. ಇದರ ಜೊತೆಗೆ ಶಾಸನದ ಆಧಾರಗಳು ಮುಖ್ಯವಾಗಿರುತ್ತವೆ. ಅಂದಿನ ಕಾಲಕ್ಕೂ ಕೂಡ ವ್ಯವಸಾಯವೇ ಜನರ ಮುಖ್ಯ ಕಸುಬಾಗಿತ್ತು. ಅದಕ್ಕೆ ಅವಶ್ಯಕವಾದ ಇತರ ಕಸುಬುಗಳು ಅಂದರೆ ಬಡಗಿ, ಕಮ್ಮಾರ, ಚಮ್ಮಾರ, ಕುಂಬಾರ ಮೊದಲಾದ ಜಾತಿಗಳಿದ್ದವು. ಒಂದೊಂದು ಹಳ್ಳಿಯಲ್ಲಿಯೂ ಈ ಜನರು ಇರಲೇಬೇಕಾಗಿದ್ದಿತು. ಈ ರೀತಿಯ ಕಸುಬುಗಳು ವಂಶಪಾರಂಪರ್ಯವಾಗಿ ನಡೆಯುತ್ತಿದ್ದವು.

ವಿವಿಧ ಧರ್ಮಗಳ ಹಿನ್ನೆಲೆಯಲ್ಲಿ ಹಬ್ಬಗಳು ಜಾತ್ರೆಗಳು, ಧಾರ್ಮಿಕ ಆಚರಣೆಗಳು ನಡೆದು ಬಂದಿರುವುದನ್ನು ಅನೇಕ ಶಾಸನಗಳಿಂದ ತಿಳಿಯಬಹುದಾಗಿದೆ. ಮನರಂಜನೆ ಹುಲಿವೇಷ ಮಾಡುತ್ತಿದ್ದರು ಮತ್ತು ಧರ್ಮ ಜಾಗೃತಿಗಳೆರಡಕ್ಕೂ ಅವು ಕಾರಣವಾಗುತ್ತಿದ್ದವು. ಸೆಟ್ಟಿ, ಮಣಿಗಾರ, ಅಕ್ಕಸಾಲಿಗ[5] ಮೊದಲಾದ ಹೆಸರುಗಳಿಂದ ಕೂಡಿದ ವ್ಯಾಪಾರಿಗಳು ಜನರಿಗೆ ಅವಶ್ಯಕವಾದ ಸಾಮಗ್ರಿಗಳನ್ನು ನೀಡುತ್ತಿದ್ದರು.

ಅಂದಿನ ಕಾಲಕ್ಕೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇತ್ತು. ಆದರೆ ಸಮಾಜದಲ್ಲಿ ಎಲ್ಲರಿಗೂ ವಿದ್ಯಾಭ್ಯಾಸ ಅವಶ್ಯಕವೆಂಬ ಭಾವನೆ ಅಷ್ಟಾಗಿ ಇರಲಿಲ್ಲ ಎಂದು ತಿಳಿದುಬರುತ್ತದೆ. ಬ್ರಾಹ್ಮಣರು ಮತ್ತು ಕ್ಷತ್ರಿಯರು ಮಾತ್ರ ಅಕ್ಷರ ಜ್ಞಾನವನ್ನು ಪಡೆಯುತ್ತಿದ್ದರು. ಇನ್ನಿತರರಿಗೆ ತಮ್ಮ ತಮ್ಮ ಉದ್ಯೋಗಗಳ ವಿದ್ಯೆಯೇ

ಸಾಕೆಂದು ವಿಧಿಸಿ ಉತ್ತಮ ವರ್ಗದವರು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದರು. ಭಾರತೀಯ ಸಮಾಜ ಒಂದೇ ಜನಾಂಗ ಸೇರಿ ಆದುದಲ್ಲ. ಅದು ಎಲ್ಲಾ ಜನಾಂಗವನ್ನು ಸೇರಿದ ರಾಷ್ಟ್ರವಾಗಿದೆ. ಅದೇ ರೀತಿ ಮಳವಳ್ಳಿ ತಾಲ್ಲೂಕಿನಲ್ಲಿಯೂ ಕೂಡ ಎಲ್ಲಾ ಜಾತಿ ಜನಾಂಗ ಪ್ರಾಚೀನ ಕಾಲದಿಂದಲೂ ಇದೆ.

ಬ್ರಾಹ್ಮಣರು ಅರ್ಚಕ ವೃತ್ತಿಯನ್ನು ಮಾಡುತ್ತಿದ್ದರು. ಅವರು ಅಗ್ರಹಾರಗಳಲ್ಲಿ ವಾಸಿಸುತ್ತಿದ್ದರು. ಮಂಡ್ಯ ಜಿಲ್ಲೆಯ ತಿಪ್ಪೂರು, ಕೆರಗೋಡು, ಕೊವಲೆವೆತು, ಮಾರೇಹಳ್ಳಿ, ಬೆಳಕವಾಡಿ, ಶಿವನ ಸಮುದ್ರ ಪ್ರಮುಖ ನೆಲೆಗಳಾಗಿದ್ದವು.

ಗೌಡ, ಒಕ್ಕಲುತನ, ಗವುಡ ಅಥವಾ ಗೌಡ ಎಂಬುದು ಊರಿನ ಯಜಮಾನ ಎನ್ನುವ ಅಧಿಕಾರಯುತ ಅರ್ಥಕ್ಕಿಂತ ಜಾತಿಯ ನೆಲೆಯಲ್ಲಿ ರೂಪುಗೊಂಡಿರಬೇಕೆನಿಸುತ್ತದೆ. ಈ ಗವುಡರು ಕೃಷಿಗಷ್ಟೇ ಸೀಮಿತಗೊಳ್ಳದೆ ತಮ್ಮ ಸಾಮರ್ಥ್ಯವನ್ನು ಕಾಳಗದಲ್ಲೂ ತೋರ್ಪಡಿಸುತ್ತಿದ್ದರು. ಕೃಷಿ ಚಟುವಟಿಕೆಗಳಲ್ಲಿ ನಿರತರಾಗುವವರನ್ನು ಒಕ್ಕಲು ಭೂಮಿಕಾರ ಎಂದು ಕರೆಯಲಾಗಿದೆ. ಒಕ್ಕಲುತನ ಮಾಡುವವರು ಒಕ್ಕಲಿಗರು, ಒಕ್ಕಲುಗಳ ಹೊಲದಲ್ಲಿ ಕೆಲಸ ಮಾಡುವ ಆಳುಗಳು ಎಂದು ಸಂಬೋಧಿಸುವುದು ಪ್ರಾಚೀನ ಕಾಲದಿಂದ ರೂಢಿಯಲ್ಲಿದೆ. ವೃತ್ತಿಗಳ ಮುಂದೆ ಜಾತಿ ಸೂಚಕಗಳಾಗಿ ಮಾರ್ಪಟ್ಟವು ಎಂದು ತಿಳಿಯಬಹುದಾಗಿದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ನೇಕಾರರು ಸಹ ಇದ್ದಾರೆ. ಈ ಭಾಗದಲ್ಲಿ ಹತ್ತಿ ಸಹ ವಾಣಿಜ್ಯ ಬೆಳೆಯಾಗಿದ್ದಿತೆಂದು ಹೇಳಬಹುದು. ನೂಲುವುದನ್ನು ಜನ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ಅಂಥ ಮಾಲಿಗೆ ಸುಂಕವನ್ನು ಕೊಡಬೇಕಾಗಿತ್ತು ಎಂದು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯ ತಾಲ್ಲೂಕಿನ ಶಾಸನದಿಂದ ತಿಳಿದುಬರುತ್ತದೆ. ಮಳವಳ್ಳಿ ತಾಲ್ಲೂಕಿನಲ್ಲಿಯೂ ಕೂಡ ನೇಕಾರರು ಅಧಿಕ ಇದ್ದರೆಂದು ಹೇಳಬಹುದು. ಕ್ರಿ.ಶ.15ನೇ ಶತಮಾನದ ಮಳವಳ್ಳಿ ತಾಲ್ಲೂಕಿನ ಚೊಟ್ಟನಹಳ್ಳಿ ಶಾಸನವು ತಲಕಾಡಿನ ಮಲ್ಲರಸನೆಂಬುವನು ವೀರಭದ್ರ ದೇವರ ನಂದಾದೀವಿಗೆಗೆ ಮಗ್ಗದೆರೆ ನೀಡಿದುದನ್ನು ದಾಖಲಿಸಿದ ಆದಕಾರಣ ಇಲ್ಲಿಯೂ ಸಹ ಹತ್ತಿ ಬೆಳೆಯುತ್ತಿದ್ದರು. ಮತ್ತೆ ಮಗ್ಗ ನೇಕಾರರು ಇದ್ದರೆಂದು ತಿಳಿದುಬರುತ್ತದೆ.

**ಮಾದಾರಿಕೆ:** ಹುಲ್ಲಿನ ಚಾಪೆ ಹಾಗೂ ಬಿದಿರುಬುಟ್ಟಿ ತಯಾರಿಕೆಯನ್ನು ವೃತ್ತಿಯಾಗಿ ಹೊಂದಿದ್ದ ಜನ ತಮ್ಮ ವೃತ್ತಿಗೆ ತೆರಿಗೆಯನ್ನು ನೀಡಬೇಕಾಗಿತ್ತು. ಮಳವಳ್ಳಿ ತಾಲ್ಲೂಕಿನ ಮಟ್ಟಗಳ್ಳಿ ಶಾಸನವು ಮಾದಾರಿಕೆ ತೆರಿಗೆಯನ್ನು ತಿಳಿಸುತ್ತದೆ. ಮಳವಳ್ಳಿ ತಾಲ್ಲೂಕಿನಲ್ಲಿ ಕಾವೇರಿ ನದಿಯು ಹರಿಯುತ್ತಿರುವುದರಿಂದ ಕಾವೇರಿ ಎರಡು ದಡಗಳಲ್ಲಿ ವ್ಯಾಪಿಸಿರುವ ಅರಣ್ಯ ಪ್ರದೇಶದಲ್ಲಿ ಹೇರಳವಾಗಿ ಬೆಳೆಯುವ ಬಿದಿರನ್ನು ಬಳಸಿ ಜನ ತಮ್ಮ ಜೀವನೋಪಾಯಕ್ಕೆ ಮಾದಾರಿಕೆಯನ್ನು ಮಾಡುತ್ತಿದ್ದರೆಂಬುದು ಇದರಿಂದ ತಿಳಿದುಬರುತ್ತದೆ.

**ಕಮ್ಮಾರರು:** ಕಬ್ಬಿಣದ ಆಯುಧಗಳು ಕೃಷಿ ಉಪಯೋಗಕ್ಕೆ ಗೃಹೋಪಯೋಗಕ್ಕೆ ಯುದ್ಧಗಳಿಗೆ ಬಳಕೆಯಾಗುತ್ತಿದ್ದವು. ಉದಾಹರಣೆಗೆ ತಲಕಾಡಿನಲ್ಲಿ ನಡೆದ ಉತ್ಖನನದಲ್ಲಿ ಪ್ರಾಚೀನ ಕಾಲದ ಕುಲುಮೆ ಕಾರ್ಖಾನೆ ದೊರೆತಿರುವುದು ಕಮ್ಮಾರಿಕೆಯ ಪ್ರಾಚೀನತೆಯನ್ನು ಸೂಚಿಸುತ್ತದೆ. ಮಳವಳ್ಳಿ ತಾಲ್ಲೂಕು ಮಾರಳ್ಳಿ/ನಿಡುಘಟ್ಟದ ಆಚಾರದ ಸಮುದಾಯದವರು ಏಳನೆಯ ಮಗನಾಗಿ ಕೆಂಪಾಚಾರಿ ಹುಟ್ಟಿದ ನಂತರ ಬಾಚಿ ಬಸವಣ್ಣಿ, ಮುದ್ದಮ್ಮರಿಗೆ ಅಪಾರ ಸಂಪತ್ತು ಐಶ್ವರ್ಯ ಲಭಿಸುತ್ತದೆ. ಕೆಂಪಾಚಾರಿ ಪಾಂಚಾಳ ಕುಲದಲ್ಲಿ ತುಂಬಾ ಶ್ರೀಮಂತ ಏಳು ಕಬ್ಬಿಣದ ಕುಲುಮೆ ಕಛೇರಿ ಒಡೆಯ ಚಿನ್ನ, ಬೆಳ್ಳಿ, ರತ್ನ, ವಜ್ರ, ವೈಡೂರ್ಯಗಳು ಈತನ ಮನೆಯಲ್ಲಿ ತುಂಬಿ ತುಳುಕುತ್ತಿತ್ತು. ಇಂತಹ ಪಾಂಚಾಳರ ಕೆಂಪಾಚಾರಿಯನ್ನು ಸಿದ್ದಪ್ಪಾಜಿಯನ್ನಾಗಿ ಪರಿವರ್ತಿಸುವ ಕ್ರಿಯೆ ಕಾವ್ಯದಲ್ಲಿ ಸಾಂಕೇತಿಕವಾಗಿ. ರಸಸಿದ್ಧ, ಶೈವ, ನಾಥ, ಸೂಫಿ ತಾಂತ್ರಿಕ ಸಿದ್ಧನನ್ನಾಗಿಸುವ ಮಂಟೆಸ್ವಾಮಿಗಳ ಉದ್ದೇಶ ಸಿದ್ದಪ್ಪಾಜಿಯವರಿಂದ ಈ ಭಾಗದಲ್ಲಿ ಕಬ್ಬಿಣ ಭಿಕ್ಷಾ ತರಿಸುವುದಾಗಿತ್ತು. ಬಹುಶಃ ಮಂಟೇಸ್ವಾಮಿ ಕಬ್ಬಿಣದ ಅದಿರು ಕರಗಿಸುವ ಕುಲಕಸುಬಿನ ಹಿನ್ನೆಲೆಯಿಂದ ಬಂದಿದುದ್ದರಿಂದ ತನ್ನ ಉತ್ತರಾಧಿಕಾರಿ ಶಿಷ್ಯನನ್ನು ಅದೇ ಕಸುಬಿನವನನ್ನೇ ಹುಡುಕಿದ್ದಾರೆ ಮತ್ತೊಂದು ಕಡೆ ರಸಸಿದ್ಧಿ ವಿದ್ಯೆಗೆ ಕಾಮಿಯ ಕಲೆಗೆ ಹತ್ತಿರದವನೆಂಬುದಿರಬೇಕು. ಆಗಿನ ಮೈಸೂರು ಸೀಮೆಯ ಪ್ರಧಾನ ಕಬ್ಬಿಣ ಉತ್ಪಾದನಾ ಕೇಂದ್ರಗಳಾಗಿದ್ದ ಹಲಗೂರು, ಜಿಲ್ಲಾಪುರ, ಚಿಕ್ಕಲ್ಲೂರುಗಳಿಂದ ಕಬ್ಬಿಣದ ಭಿಕ್ಷಾ ತರಿಸುವುದು ಈ ಭಾಗದ ಪಾಂಚಾಳರ ವೃತ್ತಿ ಮತ್ತು ಸಂಪತ್ತಿನ ಏಕಸಾಮ್ಯತೆಯನ್ನು ವಿಕೇಂದ್ರಿಕರಿಸುವ ಮತ್ತು ಅವರ ಪ್ರಾಬಲ್ಯವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವ ಸಾಂಕೇತಿಕ ಅರ್ಥವಾಗಿದೆ. ಅದಕ್ಕೆ ತಕ್ಕವನಾದ ರಸಸಿದ್ಧವನ್ನಾಗಿ ಸಿದ್ದಪ್ಪಾಜಿಯನ್ನು ತಯಾರಿಸಲಾಗುತ್ತಿದೆ. ಪಾಂಚಾಳರ ಸಿದ್ದಪ್ಪಾಜಿಯವರನ್ನು ಶಿಶುಮಗನನ್ನಾಗಿ ಮಾಡಿಕೊಂಡು ಮಂಟೇಸ್ವಾಮಿ ಬೊಪ್ಪೇಗೌಡನ ಪುರದಲ್ಲಿ ಮಠಮನೆ ಮಾಡಲು ಮತ್ತು ತಮಗೆ ಪಾತಾಳ ಬಾವಿ ನಿರ್ಮಿಸಿಕೊಳ್ಳಲು ಬೇಕಾಗುವ ಕಬ್ಬಿಣದ ಆಯುಧಗಳಿಗಾಗಿ ಕಬ್ಬಿಣ ಭಿಕ್ಷಾ ತರಲು ಸಿದ್ದಪ್ಪಾಜಿಯವರನ್ನು ಹಲಗೂರು ಪಾಂಚಾಳಗೇರಿಗೆ ಕಳುಹಿಸುತ್ತಾರೆ. ಹಲಗೂರು ಪ್ರಾಂತ್ಯದಲ್ಲಿ ಏಳು ಜನ ಪಾಂಚಾಳರು ಪಾಳೇಗಾರರಾಗಿದ್ದು, ಕಬ್ಬಿಣದ ಉತ್ಪಾದನೆಯಲ್ಲಿ ತೊಡಗಿರುತ್ತಾರೆ.

ಸಿದ್ದಪ್ಪಾಜಿಯವರ ಕಬ್ಬಿಣ ಭಿಕ್ಷಾಯಾತ್ರೆ ಒಂದು ಚಾರಿತ್ರಿಕ ಘಟನೆ. ವಿಜಯನಗರದ ಸುತ್ತಲಿನ ಬೆಟ್ಟಗಳಲ್ಲಿ ಕಬ್ಬಿಣದ ಅದಿರುಗಳನ್ನು ಕತ್ತೆಗಳ ಮೂಲಕ ಸಾಗಿಸಿಕೊಂಡು ಬಂದು ದಕ್ಷಿಣದ ಕುಲುಮೆಗಳಲ್ಲಿ ಅವುಗಳನ್ನು ಆಯುಧಗಳು ಮತ್ತು ಗೃಹೋಪಯೋಗಿ ವಸ್ತುಗಳಾಗಿ ತಯಾರಿಸುತ್ತಿದ್ದರು ಎಂದು ಕ್ರಿ.ಶ.1799 ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದ ಫ್ರಾನ್ಸಿಸ್ ಬುಕನಾನ್ ತನ್ನ ಪ್ರವಾಸಿ ಕಥನದಲ್ಲಿ ಹೇಳಿಕೊಂಡಿದ್ದಾನೆ. ಕುಶಲ ಕಲೆಗಾರಿಕೆಗೆ ಹೆಸರಾಗಿದ್ದ ಈ ಭಾಗದ ಉತ್ಪಾದನೆಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಇತ್ತು ಎಂದು ತಿಳಿಸಿದ್ದಾರೆ. ಅಕ್ಕಸಾಲೆ ಕಾಳಜೀಯನು ಬಂಗಾರದ ಕೆಲಸ ಮಾಡಿದ್ದಕ್ಕಾಗಿ ಹೊಯ್ಸಳ ಮೂರನೆಯ ನರಸಿಂಹನು ಕ್ರಿ.ಶ.1259–60 ರಲ್ಲಿ ಗದ್ದೆಯನ್ನು ಕೊಡುಗೆಯಾಗಿ ನೀಡಿದ್ದಾನೆ.

**ಬಳೆಗಾರರು:** ಬಳೆ ನಮ್ಮ ಸಂಸ್ಕೃತಿಯ ಒಂದು ಭಾಗವಾಗಿ ಬೆಳೆದು ಬಂದಿರುವುದನ್ನು ಜನಪದರು ಬಳೆಗೆ ನೀಡುತ್ತಿದ್ದ ಬೆಲೆಯನ್ನು ಕುರಿತು ಜನಪದ ಗೀತೆಗಳು ಹೇರಳ ಸಾಹಿತ್ಯವನ್ನು ಒದಗಿಸುತ್ತಗೆ. ಭಾಗ್ಯದ ಬಳೆಗಾರ ಹೋಗಿಬಾ ನನ್ನ ತವರಿಗೆ ಎಂದು ಮುತ್ತೈದೆಯರು ಬಳೆಗಾರನಿಗೆ ಹೇಳುತ್ತಿದ್ದರೆಂಬುದು ಜನಪದ ಸಾಹಿತ್ಯದಲ್ಲಿ ಉಕ್ತವಾಗಿದೆ. ಜನರಲ್ಲೂ ಬಳೆಗಾರ ವೃತ್ತಿಯನ್ನು ಕಂಡರೆ ಗೌರವ ಭಾವನೆಯಿತ್ತು. ಕ್ರಿ.ಶ.1297ರಲ್ಲಿ ಮಳವಳ್ಳಿಯ ತಾಲ್ಲೂಕಿನ ಸಜ್ಜಲೂರು ಶಾಸನವು ಬಳೆಗಾರ ಕೆಂಪಶೆಟ್ಟಿ, ಸೋಯಿಶೆಟ್ಟಿ, ಭೂಮಿಶೆಟ್ಟಿ, ಯರಗುಸೆಟ್ಟಿಗಳಿಗೆ ಸೆಟ್ಟಿಗುತ್ತಿಗೆಯಾಗಿ ಭೂಮಿಯನ್ನು ನೀಡಿದ ವಿಚಾರ ತಿಳಿದುಬರುತ್ತದೆ. ಕನ್ನಡಿ ತಯಾರಿಸುವವರ ಬಗ್ಗೆ ತಿಳಿದುಬರುತ್ತದೆ. ಉಪ್ಪು ತಯಾರಿಸುವವರು, ಚರ್ಮ ಕೆಲಸ ಮಾಡುವವರು. ಸಾಮಾಜಿಕ ಜೀವನದಲ್ಲಿ ಅಂದಿನ ಕಾಲಕ್ಕೆ ನಾನಾ ಬಗೆಯ ವೃತ್ತಿಗಳನ್ನು ಅನುಸರಿಸಿಕೊಂಡು ಜನರು ಜೀವನ ಸಾಗಿಸುತ್ತಿದ್ದರು. ಮಳವಳ್ಳಿ ತಾಲ್ಲೂಕಿನ ಯಾವ ಶಾಸನಗಳಲ್ಲೂ ವೃತ್ತಿ ದ್ವೇಷಗಳಾಗಲಿ, ಕಲಹಗಳಾಗಲಿ ದಾಖಲಾಗಿಲ್ಲದ ಕಾರಣ ಎಲ್ಲಾ ವೃತ್ತಿಗಳನ್ನು

ಅನುಸರಿಸುತ್ತಿದ್ದ ಜನರು ಪ್ರೀತಿ ಮತ್ತು ಸೌಹಾರ್ಧತೆಯಿಂದ ಬದುಕುತ್ತಿದ್ದರೆಂದು ತಿಳಿಯಬಹುದಾಗಿದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ಪದ್ಧತಿಯು ಭದ್ರವಾದ ತಳಹದಿಯ ಮೇಲೆ ಬೆಳೆದು ಬಂದಿತ್ತು. ಕುಟುಂಬದ ಬಂಧನಕ್ಕೆ ಮದುವೆ ಬಹಳ ಮುಖ್ಯವಾದ ಸಾಮಾಜಿಕ ವಿಧಿಯಾಗಿತ್ತು. ಸಾಮಾಜಿಕವಾಗಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಸತಿ ಅಥವಾ ಸಹಗಮನ ಪದ್ಧತಿ, ರಾಜ ಸತ್ತರೆ ಅವನ ಜೊತೆ ಅವನ ಪತ್ನಿಯು ಸಾಯುತ್ತಿದ್ದಳು ಇದಕ್ಕೆ ಪೂರಕವಾಗಿ ಅನೇಕ ವೀರಗಲ್ಲು, ಮಾಸ್ತಿಕಲ್ಲುಗಳು ಕಾಣಬರುತ್ತವೆ. ಪ್ರಾಚೀನ ಕಾಲದಲ್ಲಿ ವಿದ್ಯಾಭ್ಯಾಸದಲ್ಲಿ ಕಂಡುಬರುವ ಒಂದು ಪ್ರಮುಖವಾದ ಅಂಶವೆಂದರೆ, ಊರೂರುಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಅಗ್ರಹಾರಗಳು, ಮಠಗಳು, ಘಟಿಕಾ ಸ್ಥಾನಗಳು ನಿರ್ಮಾಣವಾಗಿ ವಿದ್ಯೆಯನ್ನು ಸಾಧ್ಯವಾದಷ್ಟು ರೀತಿಯಲ್ಲಿ ನೀಡುತ್ತಿದ್ದರು. ಅಗ್ರಹಾರದ ಮೂಲರೂಪ ಅಗ್ರಹಾರ ಎಂದಿರಬೇಕೆಂದೂ ಅದು ಅಗ್ರ ಆಹಾರ ಎಂಬ ಎರಡು ಪದಗಳ ಸಮಾಸವೆಂದೂ ಪ್ರೊ.ಡಿ.ಎಲ್.ನರಸಿಂಹಾಚಾರ್ಯರ ಅಭಿಪ್ರಾಯ. ಅಗ್ರ ಎಂದರೆ ಶ್ರೇಷ್ಠ ಆಹಾರ. ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ. ಅಗ್ರಹಾರದಲ್ಲಿ ಬ್ರಾಹ್ಮಣರೇ ಇರಬೇಕಿಲ್ಲ. ಬೇರೆ ಜಾತಿಯ ಜನಾಂಗಗಳು ಇರಬಹುದು. ಆದರೆ ಊರಿನ ಉತ್ಪತ್ತಿಯೆಲ್ಲವೂ ಬ್ರಾಹ್ಮಣರಿಗೆ ಸಲ್ಲುತ್ತದೆ ಎಂದರೆ ಆ ಊರಿನಿಂದ ರಾಜಾದಾಯಕ್ಕೆ ಸಲ್ಲಬೇಕಾಗಿದ್ದ ಐಶ್ವರ್ಯವನ್ನು ಬ್ರಾಹ್ಮಣರು ಅನುಭವಿಸುತ್ತಿದ್ದರು.[16] ಗ್ರಾಮಗಳನ್ನು ಅಗ್ರಹಾರಗಳಾಗಿ ಪರಿವರ್ತಿಸಿ ವೇದಶಾಸ್ತ್ರ ಪಾರಂಗತರಾದ ಬ್ರಾಹ್ಮಣರಿಗೆ ದಾನ ನೀಡಿದರೆ ಪುಣ್ಯ ಲಭಿಸುತ್ತದೆ ಎಂಬ ಹಿನ್ನೆಲೆಯಿಂದ ರಾಜರು, ರಾಣಿಯರು, ಅಧಿಕಾರಿಗಳು, ಶ್ರೀಮಂತರು ಅಗ್ರಹಾರಗಳ ನಿರ್ಮಾಣಕ್ಕೆ ಮುಂದಾಗುತ್ತಿದ್ದರು. ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಒಡೆಯರ್ ಕಾಲದಲ್ಲಿ ಅಗ್ರಹಾರಗಳು ಸ್ಥಾಪನೆಯಾಗಿರುವುದು ಮಂಡ್ಯ ಜಿಲ್ಲೆಯಲ್ಲಿರುವ ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರದ ಅರಸ ನರಸಿಂಹನ ಆಳ್ವಿಕೆಯ ಕಾಲ ಕ್ರಿ.ಶ.1506 ರಲ್ಲಿ ಉಮ್ಮತ್ತೂರು ಒಡೆಯನಾಗಿದ್ದ ಚಿಕ್ಕರಾಯನು ನಾಗಭಟ್ಟನಿಗೆ ತಲಕಾಡಿನ ಧನಗೂರು ಸ್ಥಳದ ಮೊನೆಮಟ್ಟರಹಳ್ಳಿ ಎಂಬ ಗ್ರಾಮವನ್ನು ಏಕಸ್ವಾಮ್ಯದ ಅಗ್ರಹಾರ ಮಾಡಿ ಚಿಕ್ಕರಾಯ ಸಾಗರವೆಂಬ ತನ್ನ ಹೆಸರನ್ನು ನೀಡಿ ದಾನ ಮಾಡಿದನು. ಅಗ್ರಹಾರಗಳನ್ನು ದೇವರ ಸನ್ನಿಧಿಯಲ್ಲಿ ನೀಡುವುದನ್ನು ಕೆಲವು ಸಂದರ್ಭಗಳಲ್ಲಿ ಕಾಣುತ್ತೇವೆ. ಕ್ರಿ.ಶ.12–13ನೇ ಶತಮಾನಕ್ಕೆ ಸೇರಿದ ತಮಿಳು ಶಾಸನ ಒಂದು ಹಾಗೂ ಕನ್ನಡದ ಎರಡು ಶಾಸನಗಳು ಅಂತರವಳ್ಳಿಯಲ್ಲಿ ವರದಿಯಾಗಿವೆ. ಅವುಗಳಲ್ಲಿ ಸೋಮೇಶ್ವರ ಗುಡಿಯ ತಳಪಾದಿ ಕಲ್ಲಲ್ಲಿರುವ ತಮಿಳು ಶಾಸನ ಹಿಂದೆ ಹಿರಿಯ ಬಿಟ್ಟಿದೇವನು ಅಗ್ರಹಾರವಾಗಿ ಉಂಬಳಿ ನೀಡಿದ್ದ ಕುರಿತು ತಿಳಿದುಬರುತ್ತದೆ.

ಸುಜ್ಜಲೂರು ತಾಮ್ರಶಾಸನದಲ್ಲಿ ಕ್ರಿ.ಶ.1473ರಲ್ಲಿ ವಿಜಯನಗರದ ಅರಸರ ಸಂಗಮವಂಶದ ವಿರೂಪಾಕ್ಷನು ನುಗ್ಗಿಲೂರು ಕಾಲುಪಲ್ಲಿ ಸಹವಾದ ಆಲುಗೋಡೆ ಶ್ರೋತ್ರಿಯ ಭಾಗವಾಗಿ ನೀರುಮಣ್ಣು ಸಹವಾದ ಪ್ರಸಂಗ ಚನ್ನಕೇಶ್ವಪುರವನ್ನು ಅಗ್ರಹಾರ ಮಾಡಿ ವಿವಿಧ ಬ್ರಾಹ್ಮಣರಿಗೆ ದಾನವಾಗಿ ನೀಡಿದನು. ಇದೇ ಅಲ್ಲದೆ ಅಗ್ರಹಾರ ಬಾಚಹಳ್ಳಿ ಆರುವಹಳ್ಳಿಗಳೂ ಕೂಡ ಅಗ್ರಹಾರ ಗ್ರಾಮಗಳೇ ಆಗಿದ್ದುವೆಂದು ಹೇಳಲು ಸಾಧ್ಯವಿದೆ.

**ಅಂದಿನ ಕಾಲದ ಮನೆ ಮದ್ದು:** ಪ್ರತಿಯೊಬ್ಬ ಮನುಷ್ಯನಿಗೂ ಆರೋಗ್ಯ ಅವಶ್ಯಕ. ಪ್ರತಿಯೊಂದು ಜೀವಿಗೂ ಆರೋಗ್ಯ ಮುಖ್ಯವಾಗಿರುತ್ತದೆ. ಅಂದಿನ ಕಾಲಕ್ಕೆ ಬಹಳಷ್ಟು ಸಂದರ್ಭದಲ್ಲಿ, ಮನೆಯಲ್ಲಿಯೇ ತಮಗೆ ಸುಲಭವಾಗಿ ದೊರಕುವ ವಸ್ತುಗಳಿಂದ ಔಷಧಿಯನ್ನು ತಯಾರು ಮಾಡಿಕೊಳ್ಳುತ್ತಿದ್ದರು. ಅವುಗಳಲ್ಲಿ ಹಿಪ್ಪಲಿ, ಬಜೆ, ಕಾಳು ಮೆಣಸು, ಜೀರಿಗೆ, ಅಡಿಗೆ ಅರಿಶಿಣ, ಹಸುವಿನ ಹಾಲು, ಹಸುವಿನ ಬೆಣ್ಣೆ, ಬೆಣ್ಣೆ ಕಾಯಿಸಿದ ತುಪ್ಪ, ಹೊನೆಗೊನೆ ಸೊಪ್ಪು, ಒಂದಲಗ, ಕರಿಬೇವಿನ ಸೊಪ್ಪು, ಕಲ್ಲುನಾರು, ಬಿಳಿದಾಸವಾಳದ ಎಲೆ, ಧನಿಯ, ತುಳಸಿ, ವೀಳ್ಯೆದೆಲೆ, ನಾಗದಾಳಿ ಸೊಪ್ಪು, ಅಡಿಕೆ ಸೊಪ್ಪು, ಕಿರುನಲ್ಲಿ, ಮೆಂತ್ಯದಕಾಳು, ಶುಂಠಿ, ಹರಳೆಣ್ಣೆ ಇವುಗಳನ್ನು ಬಳಸುತ್ತಿದ್ದರು. (ಮಳವಳ್ಳಿಯ ಕಿರು ಲೇಖಕರು ಮ.ಸಿ.ನಾರಾಯಣರವರಿಂದ ಮಾಹಿತಿ ಪಡೆದಿರುತ್ತೇನೆ.)

**ಅಂದಿನ ಕಾಲದ ಗೃಹಬಳಕೆ ವಸ್ತುಗಳು:** ಮೊದಹುಲ್ಲಿನಪುಟ್ಟ, ಮೊರ, ಕೊಂಗಮಾರ, ಗೆರಸಿ, ಗೊಡ, ಪುಟ್ಟಿ, ತಡಿಕೆ, ಚಂದ್ರಿಕೆ, ಜರಡಿ, ಸೇರು, ಪಾವು, ಬಳ್ಳ, ಕೊಳಗ, ಮಡಿಕೆ, ಕುಡಿಕೆ, ಹರಿವೆ, ಏಳಗ, ಜಾಡಿ, ಕಲ್ಲು ಮರಿಗೆ, ಕಲ್ಲು ಕುಡಿಕೆ, ಗೇರುಗೊಡೆ, ಸಟ್ಟುಗ, ಕಲ್ಲುಪತ್ತು, ಈಳಿಗೆ ಮಣೆ, ವರಳುಕಲ್ಲು, ಬೀಸುವಕಲ್ಲು, ಕುಟ್ಟಾಣಿ, ಒನಕೆ, ಕುದ್ನಿ, ಕುಡಗೋಲು, ಮಂತು, ದೊಡ್ಡಮರಿಗೆ, ಚಿಕ್ಕಮರಿಗೆ, ಹಂಡೆ, ಬಟು, ಕೈಮರಿಗೆ, ಸೊಪ್ಪಿನ ಗೊಡೆ, ಬೆಬ್ಬಲು, ತೊಂಬೆಗಳೆ ಮೊದಲಾದವುಗಳನ್ನು ಅಂದಿನ ಕಾಲದಿಂದಲೂ ಬಳಕೆಯಾಗಿರುವುದು ತಿಳಿದುಬರುತ್ತದೆ. ಅಲ್ಲದೆ ರೈತರಿಗೆ ಬೇಕಾದ ಬೇಸಾಯದ ಸಲಕರಣೆಗಳನ್ನು ಓಜಿ, ಕಮ್ಮಾರ, ಮೇದರುಗಳಿಂದ ಪಡೆಯುತ್ತಿದ್ದರೆಂಬುದು ಕೆಲವೊಂದು ಶಾಸನಗಳಿಂದ ತಿಳಿದುಬರುತ್ತದೆ. (ಮೇಲ್ಕಂಡ ವಿಚಾರಕ್ಕೆ ಪೂರಕವಾಗಿ ಪ್ರತಿಯೊಂದು ಊರಿನಲ್ಲೂ ಲಭ್ಯವಿರುತ್ತದೆ)

**ಆಟೋಟಗಳು:** ಪ್ರಾಚೀನ ಕಾಲದಿಂದಲೂ ಆಟೋಟಗಳ ಬಗ್ಗೆ ತಿಳಿದುಬರುತ್ತದೆ. ಗ್ರಾಮೀಣ ಗಂಡಸರು, ಹುಡುಗರು, ಚಿನ್ನಿದಾಂಡು, ಲಗೋರಿ, ಗುಂಡು ಎತ್ತುವುದು, ಚೆಂಡಿನಾಟ, ಮರಕೋತಿ, ಹುಲಿಕಲ್ಲು, ಪಚ್ಚಿಯಾಟ, ಬುಗುರಿ, ಗೋಲಿ, ಗೆಜ್ಜುಗ, ದೊಣ್ಣೆವರಸೆ, ಕತ್ತಿವರಸೆ ಮೊದಲಾದ ಆಟಗಳನ್ನು ಆಡುತ್ತಿದ್ದರು. ಹೆಣ್ಣು ಮಕ್ಕಳು ಕುಂಟೆಬಿಲ್ಲೆ, ಅಳಿಗುಳಿ ಮಣೆ, ಚೌಕಾಬಾರ, ಕವಡೆಯಾಟ, ಆಣೆಕಲ್ಲು, ಕಣ್ಣಾಮುಚ್ಚಾಳೆ, ಕಂಬ ಎತ್ತುವ ಆಟಗಳನ್ನು ಆಡುತ್ತಿದ್ದರು. ಇಂದಿಗೂ ಕೂಡ ಅನೇಕ ಊರುಗಳಲ್ಲಿ ಪ್ರಾಚೀನ ಕಾಲದ ಕಲ್ಲಿನ ಗುಂಡುಗಳು, ಅಳಿಗುಳಿ ಕಲ್ಲು, ಮರದ ಕಲ್ಲುಗಳು ದೊರೆಯುತ್ತವೆ. ಇವೆಲ್ಲವೂ ಕೂಡ ಸಾಮಾಜಿಕ ಜೀವನದಲ್ಲಿ ಕಂಡುಬರುವ ಪ್ರಮುಖ ಆಟೋಟಗಳಾಗಿವೆ. ಕಿರಗಸೂರು, ಧನಗೂರು, ಹುಲ್ಲೇಗಾಲ, ಕಲ್ಕುಣಿ ಮೊದಲಾದ ಊರುಗಳಲ್ಲಿ ಆಟೋಟಕ್ಕೆ ಸಂಬಂಧಿಸಿದಂತೆ ಗುರುತಿಸಲಾಗಿದೆ.

**ಸೂತ್ರದ ಗೊಂಬೆಯಾಟ:** ಅಂದಿನ ಕಾಲದಿಂದಲೂ ಸೂತ್ರದ ಗೊಂಬೆಯಾಟವನ್ನು ಅಲ್ಲದೆ ತೊಗಲು ಗೊಂಬೆಯಾಟವನ್ನು ಜನಪದ ರಂಗ ಭೂಮಿಯಲ್ಲಿ ಕಾಣುತ್ತೇವೆ. ಇದು ಕ್ರಿ.ಶ.10ನೇ ಶತಮಾನದಲ್ಲಿಯೂ ಸಹ ಇತ್ತು. ಅನೇಕ ದೇವಾಲಯಗಳಲ್ಲಿ ಗೊಂಬೆಯ ಚಿತ್ರಗಳಿವೆ. ಗೊಂಬೆಯಾಟ ಪ್ರಪಂಚದಾದ್ಯಂತ ಕಂಡುಬರುವ ಪ್ರಾಚೀನ ಕಲೆಯಾಗಿದೆ. ಮಳವಳ್ಳಿಗೆ ಸಮೀಪದ ಚನ್ನಪಟ್ಟಣ ಆಟದ ಗೊಂಬೆ ಒಂದು ಪ್ರಮುಖ ನೆಲೆಯಾಗಿದೆ. ಇದು ನೆನ್ನೆ ಮೊನ್ನೆಯದಲ್ಲ. ಸಾವಿರಾರು ವರ್ಷಗಳಿಂದ ನಡೆದುಬಂದಿದೆ. ಸೂತ್ರದ ಗೊಂಬೆಗಳು ರಥಗಳಲ್ಲಿ ಮತ್ತು ದೇವಾಲಯಗಳ ಭಿತ್ತಿಯ ಭಾಗದಲ್ಲಿ ಗೊಂಬೆಗಳ ಚಿತ್ರಗಳನ್ನು ಗುರುತಿಸಲಾಗಿದೆ.

**ನಂದಿ ಕಂಬದ ಕುಣಿತ:** ನಂದಿಕಂಬದ ಕುಣಿತ ನಂದಿಕೋಲು ಎಂದು ಕರೆಯುವುದುಂಟು. ಶೈವ ಮೂಲದ ನೃತ್ಯಗಳಲ್ಲಿ ನಂದಿಕಂಬದ ಕುಣಿತ ಬಹಳ ಪ್ರಸಿದ್ಧ. ಕ್ರಿ.ಶ.10 ರಿಂದ 16ನೇ ಶತಮಾನಕ್ಕೆ ಸೇರಿದ ಕೆಲವು ಶೈವ ದೇವಾಲಯಗಳಲ್ಲಿ ನಂದಿ ಕಂಬಗಳನ್ನು ಕಾಣಬಹುದು. ಇದರ ಹಿನ್ನೆಲೆಯಲ್ಲಿಯೇ ನಂದಿ ಕುಣಿತದ ಒಂದೇ ಸಂಕೇತ ಎಂದರೆ ತಪ್ಪಾಗಲಾರದು. ಉದಾಹರಣೆಗೆ ಮಳವಳ್ಳಿ ಕೋಟೆ ಗಂಗಾಧರೇಶ್ವರ ದೇವಾಲಯ ಒಂದು ಉದಾಹರಣೆಯಾಗಿದೆ.

**ಸಮಾಜ ಮತ್ತು ಧರ್ಮ:** ಯಾವುದೇ ಒಂದು ನಾಡಿನ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಿದರೂ ಅಲ್ಲಿಯ ಸಂಸ್ಕೃತಿ ವಿಕಾಸಗೊಳ್ಳಲು ಆ ಒಂದು ಪರಿಸರದಲ್ಲಿ ನೆಲೆಸಿದ್ದ ಜನಜೀವನವೇ ಪ್ರಮುಖ ಕಾರಣವಾಗಿರುತ್ತದೆ. ಸಮಾಜದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಪ್ರಗತಿಗೆ ಪುರುಷರ ಹಾಗೂ ಸ್ತ್ರೀಯರ ಕೊಡುಗೆ ಮತ್ತು ಸಾಧನೆಗಳನ್ನು ಸಹ ಕಾಣಬಹುದಾಗಿದೆ. ಸಮಾಜದ ಜೀವನಾಡಿಯಾಗಿ ಸಂಸ್ಕೃತಿಯ ಬುನಾದಿಯಾಗಿ ಪುರುಷರು ಮತ್ತು ಮಹಿಳೆಯರು ಬದುಕಿ–ಬಾಳಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಜೀವನದಲ್ಲಿ ಬೆರೆತು ಹೋಗಿರುವುದನ್ನು ನಾವು ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ.

ಸಮಾಜದಲ್ಲಿ ಗಂಡು ತಂದೆಯಾಗಿ, ಯಜಮಾನನಾಗಿ, ಊರಿನ ಮುಖ್ಯಸ್ಥನಾಗಿ, ನಾಡಿನ ಪ್ರಜೆಯಾಗಿ ನಡೆದುಕೊಂಡು ಬಂದಿರುವುದನ್ನು ಗಮನಿಸಿದ್ದೇವೆ. ಅದರಂತೆ ಮಹಿಳೆಯರು ಕೂಡ ಸಮಾಜದಲ್ಲಿ ಮಗಳಾಗಿ, ಪತ್ನಿಯಾಗಿ, ತಾಯಿಯಾಗಿ, ಸೋದರಿಯಾಗಿ, ಗೆಳತಿಯಾಗಿ, ಒಡತಿಯಾಗಿ, ಪೋಷಕಿಯಾಗಿ, ನಾಡಿನ ಪ್ರಜೆಯಾಗಿ ಸಮಾಜದಲ್ಲಿ ಕಾಣಬಹುದು. ಹೀಗೆ ಬಹುರೂಪಳಾಗಿ ತನ್ನದೇ ಆದ ಪ್ರೀತಿವಾತ್ಸಲ್ಯಗಳ ಸೆಲೆಯನ್ನು ಬಾಂಧವ್ಯವನ್ನು ಬೆಸೆದಿದ್ದಾರೆ. ಪುರುಷ ಮತ್ತು ಮಹಿಳೆಯರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ತಮ್ಮದೇಯಾದ ಸಾಮರ್ಥ್ಯವನ್ನು ನೀಡಿದ್ದಾರೆ.

ಅದೇ ರೀತಿ ಪ್ರಸ್ತುತ ಸಂಶೋಧನೆಗೆ ಪೂರಕವಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ನಾನಾ ಊರುಗಳಲ್ಲಿ ಈ ಮೇಲಿನ ರೀತಿಯಲ್ಲಿ ಆಯಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುವುದನ್ನು ಗಮನಿಸಬಹುದಾಗಿದೆ. ಮಳವಳ್ಳಿ ತಾಲ್ಲೂಕಿನ ಕೆಲವೊಂದು ಶಾಸನಗಳನ್ನು ಅಧ್ಯಯನ ಮಾಡಿದರೆ, ಸಮಾಜದಲ್ಲಿ ವಿವಿಧ ನೆಲೆಗಳ ಮೇಲೆ ಬೆಳಕು ಚೆಲ್ಲಲು ಯತ್ನಿಸಲಾಗಿದೆ. ಮಳವಳ್ಳಿ ತಾಲ್ಲೂಕಿನಲ್ಲಿ ಪ್ರಾಚೀನ ಕಾಲದಿಂದಲೂ ನಾಡಿನ ಹಿರಿಯರು, ಗಾವುಂಡರು, ಶಾನುಭೋಗರು, ಗ್ರಾಮಲೆಕ್ಕಿಗರು, ರಾಜರು, ಯುವರಾಜರು, ಸೇನಾನಾಯಕರು, ಮಂತ್ರಿಗಳು, ಅಧಿಕಾರಿಗಳು, ಸಾಮಾನ್ಯ ಮಹಿಳೆಯರು, ನಿಷ್ಠಾವಂತರು ಸಮಾಜದ ಕೆಲಸಕಾರ್ಯದಲ್ಲಿ ಭಾಗಿಯಾಗಿದ್ದಾರೆ. ಕೆರೆಗಳನ್ನು ನಿರ್ಮಿಸುವುದು, ದೇವಾಲಯಗಳನ್ನು ಕಟ್ಟಿಸುವುದು, ದಾನದತ್ತಿಗಳನ್ನು ನೀಡುವುದು, ದೇವರ ಕೆಲಸ ಕಾರ್ಯದಲ್ಲಿ ಭಾಗಿಯಾಗುವುದು, ಅಂದಿನ ಕಾಲದ ಸಮಾಜದಲ್ಲಿದ್ದ ಧಾರ್ಮಿಕ ಮನೋಭಾವವು ಅದರ ಸುಸಂಸ್ಕೃತ ಬದುಕಿನ ಪರಿಯಾಗಿ ಬಾಳಿನ ಸಾರ್ಥಕತೆಯ ಫಲ ನೀಡಿ ಸಮಾಜದಲ್ಲಿ ಅಮರತ್ವವನ್ನು ತಂದು ಕೊಟ್ಟಿದೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಗಮನಿಸಿದರೆ ಕ್ರಿ.ಶ.10ನೇ ಶತಮಾನದಿಂದ ಕ್ರಿ.ಶ.16ನೇ ಶತಮಾನದಲ್ಲಿಯೂ ಸಮಾಜದ ಬಗೆಯನ್ನು ಗಮನಿಸಿದರೆ ಒಂದು ಸುವರ್ಣಯುಗವೆಂದೇ ಭಾವಿಸಬಹುದಾಗಿದೆ. ಏಕೆಂದರೆ ಅಂದಿನ ಕಾಲದಲ್ಲಿದ್ದ ರಾಜರು, ಅರಸರು, ತಮ್ಮ ಹಿರಿಮೆ–ಗರಿಮೆಗಳಿಂದ ಬೆಳಗಿದರೆ ಅದಕ್ಕೆ ಕಾರಣ ಅಂದಿನ ಕಾಲದ ಅಧಿಕಾರಿವರ್ಗ, ಸೇವಕವರ್ಗ, ಪ್ರಾಮಾಣಿಕತೆ, ಸ್ವಾಮಿನಿಷ್ಠೆಗಳ ಪ್ರತಿರೂಪವಾಗಿದ್ದು, ಆಯಾ ಪ್ರಾಂತ್ಯದ ಪ್ರಗತಿಗೆ ಕಾರಣರಾಗಿದ್ದಾರೆ. ವಿಶೇಷವಾಗಿ ತನುಮನಧನಗಳನ್ನು ತ್ಯಾಗ ಮಾಡಿ ರಾಜರಿಗಾಗಿ ಸಮಾಜಕ್ಕಾಗಿ ಹೋರಾಡಿ ಮಡಿದ ಅನೇಕ ಪುರುಷ–ಸ್ತ್ರೀಯರನ್ನು ಕಾಣಬಹುದು. ಸಮಾಜದಲ್ಲಿ ಗರುಡರು ಆ ಕಾಲದ ಪರಮ ಸಾಹಸಿಗಳೆನಿಸಿದರೆ, ಅವರಷ್ಟೇ ಆತ್ಮಸ್ಥೈರ್ಯವನ್ನು ಮೆರೆದು ಗತಿಸಿದ ವೀರನೊಂದಿಗೆ ಆತ್ಮಾಹುತಿಗೆ ಸಿದ್ಧಳಾಗಿ ಮಹಿಳೆಯರು ಇರುತ್ತಿದ್ದರು. ಸಹಗಮನ ಮಾಡಿರುವ ಗರುಡರೊಂದಿಗೆ ದೀಕ್ಷೆವಹಿಸಿ ಮರಣವನ್ನು ಪಡೆಯುತ್ತಿದ್ದರು. ಇದರ ಕುರಿತು ಮಳವಳ್ಳಿ ತಾಲ್ಲೂಕಿನ ನಾನಾ ಊರುಗಳಲ್ಲಿ ವೀರಗಲ್ಲು ಮಾಸ್ತಿಕಲ್ಲುಗಳಿವೆ.

ಈ ಎಲ್ಲಾ ಬೆಳವಣಿಗೆಯಿಂದ ಮಳವಳ್ಳಿ ತಾಲ್ಲೂಕಿನ ಪರಿಸರದಲ್ಲಿ ನಾನಾ ಭಾಗಗಳಲ್ಲಿ ವೀರಗಲ್ಲು, ಮಾಸ್ತಿಕಲ್ಲು, ಶಾಸನಗಳು, ಗರುಡರ ಶಾಸನಗಳು ಈ ಹಿನ್ನೆಲೆಯಲ್ಲಿಯೇ ಮಾಡಿಸಿರುವುದು ಕಂಡುಬರುತ್ತದೆ. ಸಮಾಜದಲ್ಲಿ ಪುರುಷರಂತೆ ಮಹಿಳೆಯರು ಪಾತಿವ್ರತ್ಯವನ್ನು ಮೆರೆದು ವೀರಪತಿಯೊಂದಿಗೆ ತಮ್ಮ ಐಹಿಕ ಬದುಕನ್ನು ಅಂತ್ಯಗೊಳಿಸಿಕೊಂಡಿರುವುದು ತಿಳಿದುಬರುತ್ತದೆ. ಇದರಂತೆ ಅನೇಕ ಪುರುಷರು, ಮಹಿಳೆಯರು ಸಂಗೀತ, ನೃತ್ಯ, ಕಲಾವಿದೆಯರಾಗಿದ್ದು, ತಮ್ಮ ಕಲಾವಂತಿಕೆಯನ್ನು ದೇವರ ಪೂಜಾ ಸಮಯದಲ್ಲಿ ಸೇವೆಯ ರೂಪದಲ್ಲಿ ಸಲ್ಲಿಸುತ್ತಿದ್ದರು. ಅದಕ್ಕೆ ಪೂರಕವಾಗಿ ಮಳವಳ್ಳಿ ತಾಲ್ಲೂಕಿನ ವಿವಿಧ ದೇವಾಲಯಗಳಲ್ಲಿ ಈ ರೀತಿ ಉಬ್ಬುಶಿಲ್ಪಗಳನ್ನು ಗಮನಿಸಬಹುದಾಗಿದೆ. ರಾಣಿಯರು, ಮಹಿಳೆಯರು ಅಂದಿನ ಕಾಲಕ್ಕೆ ಸಂಗೀತ, ನೃತ್ಯ, ಚಿತ್ರ ಮೊದಲಾದ ಕಲೆಗಳನ್ನು ಕಲಿತ ನಿಪುಣೆಯರಾಗಿದ್ದರೆಂದು ತಿಳಿಯಬಹುದಾಗಿದೆ. ಪ್ರಾಚೀನ ಕಾಲದ ಮಹಿಳೆಯರ ಬದುಕಿನಲ್ಲಿ ಹಲವು ಮಗ್ಗುಲುಗಳನ್ನು ತೆರೆದಿತ್ತಿದ್ದು, ಸಮಾಜದಲ್ಲಿ ಅನೇಕ ರೀತಿಯ ಸ್ಥಾನಮಾನಗಳನ್ನು ಪಡೆದಿದ್ದರು ಎಂಬುದು ತಿಳಿದುಬರುತ್ತದೆ. ಸಮಾಜದಲ್ಲಿ ಜಾನಪದ, ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ ಇನ್ನಿತರ ಮನೋಧರ್ಮದ ಎಲ್ಲಾ ಹಂತಗಳನ್ನು ಪ್ರತಿಬಿಂಬಿಸುವುದನ್ನು ಆಯಾ ಪ್ರಾದೇಶಿಕ ನೆಲೆಗಳಲ್ಲಿ ಕಾಣಬಹುದಾಗಿದೆ.

ನಮ್ಮ ಸಮಾಜದ ಸಮನ್ವಯ ಸಂಸ್ಕೃತಿಯು ಸಾರಿದ ಮುಖ್ಯವಾದ ಸಂದೇಶ, ಸಂಸ್ಕಾರದಿಂದ ಸಂಬಂಧಗಳು ಬೆಳೆಯುತ್ತವೆ. ನಮ್ಮ ಸಮಾಜ ಜೀವನದ ಮುಖ್ಯವಾದ ಘಟಕವೆಂದರೆ, ಮದುವೆ. ಇದು ಬಹುಕಾಲದಿಂದಲೂ ಭಾರತೀಯ ಸಮಾಜದ ಆದರ್ಶವಾಗಿ ಬೆಳೆದುಬಂದಿದೆ. ಸಮಾಜದಲ್ಲಿ ಗಂಡು, ಹೆಣ್ಣು, ಮದುವೆ, ಸಂಸಾರ, ಸಂಸ್ಕಾರ, ಪೂಜೆ, ಪುನಸ್ಕಾರಗಳು, ಹಬ್ಬ ಹರಿದಿನಗಳು ಇನ್ನೂ ಮೊದಲಾದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಮಾಜದಲ್ಲಿ ಕಾಣುತ್ತೇವೆ. ಇದನ್ನೆಲ್ಲಾ ಹೊಂದಿರುವುದೇ ಒಂದು ಸಮಾಜ ಎಂಬ ಪರಿಕಲ್ಪನೆ ಭಾರತೀಯ ಸಮಾಜದಲ್ಲಿದೆ.